ಶ್ರೀ ಮುಲ್ಕಗೋವಿಂದರೆಡ್ಡಿ.–Representation of People Act, ಪ್ರಕಾರ ಪಜೇರ್ ಶ್ಯಾನುಭೋಗರು ಪಾರ್ಲಮೆಂಟ್, ರೆಜಿಸ್ಟ್ರೇಡರ್ ಮತ್ತು ಟೌನ್ ಮುನಿಸಿಪರ್ ಕೌನ್ಸಿಲ್ಲಗೆ ನಿಲ್ಲಲು ಅವಕಾಶವಿಲ್ಲವೆಂದು ಹೇಳಿದಿರಿ; ಅದೇ ಕಾನೂನನ್ನು ಇತರ ಜುನಾವಣೆಗಳಿಗೂ ಅನ್ವಯಿಸರಾಗುವುದಿಲ್ಲವೇ?

ಶ್ರೀ ಟಿ. ಚೆನ್ನಯ್ಯ.—ಅಯಾ ಜುನಾವಣೆಗಳಿಗೆ ಸಂಬಧಿಸುವ ಕಾನೂನು ನಿಯಮಗಳಿಗೆ ಅನುಸಾರವಾಗಿ ನಡೆಯಬೇಕಾಗುತ್ತದೆ.

ಶ್ರೀ ಮುಲ್ಕಗೋವಿಂದರೆಡ್ಡಿ.—ಇವರ ಪೈಕಿ ಯಾರಾದರೂ ರಾಜಕೀಯ ಪಕ್ಷಕ್ಕೆ ಸದಸ್ಯರಾಗಬಹುದೇ?

ಶ್ರೀ ಟಿ. ಚೆನ್ನಯ್ಯ —ಕೂಡದು.

ಶ್ರೀ ಮುಲ್ಕಗೋವಿಂದರೆಡ್ಡಿ.—ಆಗಿದ್ದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವಿರಾ?

Sri T. CHANNIAH.—It is a hypothetical question.

ಶ್ರೀ ಮುಲ್ಕಗೋವಿಂದರೆಡ್ಡಿ.—ಆಗಿದ್ದಾರೆ.

Mr. SPEAKER.—If it is brought to their notice, it will be considered.

Sri B. NARAYANASWAMY.—Sir, to-morrow I may be permitted to put supplementaries on Question No. 37 which stands in my name, Sir.

Mr. SPEAKER.—We will see if there is time. Any how you may now put Question No. 45.

Hardship caused by the levy of sales-tax on petty traders in Mysore City.

Q.—45. Sri B. NARAYANASWAMY (Mysore City South).—

Will the Government be pleased to state :—

(*a*) the estimated collection of sales-tax in Mysore City and actual collection for the years 1950-51 and 1952 up to January1953 ;

(*b*) the collection for the year 1951 and 1952 on slabwar basis in Mysore City and number of licenses on slabwar basis ;

(*c*) the total number of licenses for the year 1951-52 and 1952-53 whose turnover is less than Rs. 7,500, between Rs. 7,500 and 10,000, Rs. 10,000 to Rs. 25,000, and those above Rs. 25,000 in Mysore City ;

(*d*) the number of persons that have been prosecuted in the year 1952 and the number of them convicted under the Sales-Tax Act in the City ;

(*e*) whether it is not a fact that several representations have been made to them by representatives of petty traders, big merchants and general merchants' Associations to remove the hardships caused by the levy of sales-tax ?

A.—Sri KADIDAL MANJAPPA (Minister for Revenue and Public Works).—

(*a*)

Year	*Demand*	*Collection*
	Rs.	Rs.
1950-51 ..	13,06,378 ..	7,19,975
1951-52 ..	13,45,769 ..	7,08,407
1952-53 ..	14,69,867 ..	9,31,380
	(up-to January 1953).	

(*b*)

	1951-52	*1952-53*
	Rs.a.p.	Rs.a.p.
(1) Amount collected ..	1,393-4-7	798-0-6
(2) Number of dealers assessed on slabwar basis	28	29
(Licenses are not issued on slabwar basis)		

(*c*)

Number of licenses in the case of dealers whose turnover is less than—		
(1) Rs. 7,500 ..	5	3
(2) Between Rs. 7,500 and Rs. 10,000 ..	12	11
(3) Between Rs. 10,000 and Rs. 25,000 ..	10	13
(4) Above Rs. 25,000 ..	52	53

(*d*)

Number of persons prosecuted ..	13	235
Number of persons convicted ..	6	41

(*e*) Yes. A Committee has therefore been constituted to examine the working of the Sales-Tax Act and to suggest measures on the lines of the terms referred to it.

ಶ್ರೀ ಬಿ. ನಾರಾಯಣಸ್ವಾಮಿ.—ಡಿಮ್ಯಾಂಡಿಗೂ ಕಲೆಕ್ಷನ್ನಿಗೂ ಅಂತರ ಇರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಜನಕೊಡದೇ ಇರುವುದೂ ಒಂದು ಕಾರಣ.

ಶ್ರೀ ಬಿ. ನಾರಾಯಣಸ್ವಾಮಿ.—ಕೊಡವೇ ಹೋದರೆ ಏಕೆ ಕೊಡುವ ಹಾಗೆ ಮಾಡಿಕೊಳ್ಳಲಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಇದೇ ಮಾಡುತ್ತಾ ಇದ್ದೇವೆ. ಪ್ರಾಸಿಕ್ಯೂಷನ್ ಹಾಕುತ್ತಾ ಇದ್ದೇವೆ. ಬೇರೆ ಮಾರ್ಗವನ್ನು ಅನುಸರಿಸುತ್ತಾ ಇದ್ದೇವೆ.

ಶ್ರೀ ಬಿ. ನಾರಾಯಣಸ್ವಾಮಿ —1950—51, 51—52, 52—53ನೇ ವರ್ಷಗಳಲ್ಲೂ ಕೂಡ ತಮ್ಮ ಡಿವ್ಯಾಂಡ್ ಬಹಳ ಹೆಚ್ಚಾಗಿದೆ ಎಂದು ಕಾಣುತ್ತಾ ಇಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ನಾರಾಯಣಸ್ವಾಮಿ.—ಅಂದ ಮೇಲೆ ಕರೆಕ್ಷನ್ ಪ್ರತಿವರ್ಷ ಮಾಡುತ್ತಿರುವುದು ಕಡಮೆ, ಎಸ್ಸಿ, ಪೋಸ್ಟೆಡ್ ಡಿವ್ಯಾಂಡ್ ಹೆಚ್ಚು, ಹೀಗೆ ಆಗುತ್ತಾ ಇರುವುದರಿಂದ ಇದು ಬಹುಶಃ ಆರ್ಬಿಟ್ರರಿ ಎಂದು ಹೇಳಬಹುದೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಇನ್‌ಫರ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಹೋಗಲಿ, ಮೈಸೂರು ಸಿಟಿಯೊಳಗೆ ರಿಜಿಸ್ಟರ್ಡ್ ಡೀಲರ್ಸ್ ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳಬಲ್ಲಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹೇಳಲಿಕ್ಕೆ ನೋಟೀಸ್ ಬೇಕು.

ಶ್ರೀ ಬಿ. ನಾರಾಯಣಸ್ವಾಮಿ.—235 ಪ್ರಾಸಿಕ್ಯೂಷನ್ ಆಗಿದೆ ಎಂದು ಹೇಳಿದ್ದೀರಿ. ಈ 235ರಲ್ಲಿ ಯಾವ ಯಾವ ರೀತಿ, ಯಾವ ಯಾವ ವಿಷಯದಲ್ಲಿ ಪ್ರಾಸಿಕ್ಯೂಟ್ ಮಾಡಿದ್ದೀರಿ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಟ್ಯಾಕ್ಸ್ ಕೊಡದೇ ಇದ್ದದ್ದೇ ಬಹುಮಟ್ಟಿಗೆ.

ಶ್ರೀ ಬಿ. ನಾರಾಯಣಸ್ವಾಮಿ.—ಕೊಡಬೇಕಾದದ್ದನ್ನು ಕೊಡದೇ ಇದ್ದರೆ ಅಂಥವರನ್ನು ಅರೆಸ್ಟ್ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಟ್ಯಾಕ್ಸ್ ಕೊಡದೇ ಇದ್ದರೆ, ಕೆಲವು ಸಂದರ್ಭಗಳಲ್ಲಿ ಸೇಲ್ಸ್ ಟ್ಯಾಕ್ಸ್ ಆಕ್ಟಿನ ನಿಯಮವನ್ನು ಉಲ್ಲಂಘನೆಮಾಡಿ ನಪೆಡಿದ್ದರೆ.

ಶ್ರೀ ಬಿ. ನಾರಾಯಣಸ್ವಾಮಿ.—ಅರಿಯರ್ಸ್ ವಸೂಲು ಮಾಡುವಾಗ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಬಹಳ ಕಿರುಕುಳ ಕೊಡುತ್ತಾರೆ ಎಂಬುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಕಿರುಕುಳ ಆಗಿದೆ ಎಂದು ಕೆಲವರು ಸರ್ಕಾರದ ವರಗಮನಕ್ಕೆ ತಂದಿದ್ದಾರೆ.

ಶ್ರೀ ಬಿ. ನಾರಾಯಣಸ್ವಾಮಿ.—ಸ್ಲಾಬ್‌ವಾರ್ ಬೇಸಿಸ್ ಮೇಲೆ ಕರೆಕ್ಷನ್ ಮಾಡುತ್ತೀರಿ. ಫೀಳೆದರೆ, ಬಾಳೆತಣ್ಣು ವ್ಯಾಪಾರಮಾಡತಕ್ಕ ಸಣ್ಣಪುಟ್ಟ ವ್ಯಾಪಾರಗಾರರನ್ನು ಟ್ಯಾಕ್ಸ್ ಕೊಡಬೇಕು ಇಲ್ಲದೇ ಇದ್ದರೆ ಪ್ರಾಸಿಕ್ಯೂಟ್‌ಮಾಡುತ್ತೇವೆ' ಎಂದು ಹೆದರಿಸಿ ಕರೆಕ್ಷನ್ ಮಾಡಿದ್ದಾರೆ ಎಂದು ದೂರು ಬಂದಿದೆಯೇ.

ಶ್ರೀ ಕಡಿದಾಳ್ ಮಂಜಪ್ಪ.—ಹೆದರಿಸಿ, ಕಿರುಕುಳ ಕೊಟ್ಟು ಸಂಪಾದನೆಮಾಡಬೇಕೆಂಬ ಉದ್ದೇಶ ಸರ್ಕಾರದವರಿಗೆ ಇಲ್ಲವೇ ಇಲ್ಲ.

ಶ್ರೀ ಜಿ. ದುಗ್ಗಪ್ಪ.—Is any training given to them before they are appointed? ಈ ಸೇಲ್ಸ್ ಟ್ಯಾಕ್ಸ್ ಆಫೀಸರುಗಳನ್ನು ಟ್ರೈನಿಂಗ್‌ಗೆ ಕಳುಹಿಸಿ ಕೊಡುತ್ತೀರಾ?

(No answer)

ಶ್ರೀ ಯು. ಎಂ. ಮಾದಪ್ಪ.—ಈ ಕಾನೂನು ಮತ್ತು ಈ ಅಂಕಿಅಂಶ ಇದನ್ನೆಲ್ಲಾ ನೋಡಿದರೆ ಮಹಮದ್‌ಬಿನ್ ತೊಗಲಖಿನ ಕಾಲದಲ್ಲೂ ಈ ರೀತಿ ಇರಲಿಲ್ಲ ಎಂದು ಭಾನವಾಗುತ್ತದೆಯಲ್ಲವೇ?

(ಸಭೆಯಲ್ಲಿ ನಗು!)

(No answer)

Sri M. PALANIYAPPAN.—Sir, how many business men are members in this Committee?

Sri KADIDAL MANJAPPA.—I remember it is only one.

Sri M. PALANIYAPPAN.—May I know who is that, Sir?

Sri KADIDAL MANJAPPA.—The President of the Mysore Chamber of Commerce and there is the General Manager of the Mysore Bank also.

Sri M. PALANIYAPPAN.—Are these the only representatives of the business community, Sir?

Sri KADIDAL MANJAPPA.—The number I think is sufficient.

Sri M. PALANIYAPPAN.—Sir, is the Government aware that most of the business people are affected by these difficulties in the sales-tax levy?

Sri KADIDAL MANJAPPA.—Not most of them.

Sri M. PALANIYAPPAN.—Will the Government consider the question of appointing some representatives of the business community to serve in the committee, Sir?

Sri KADIDAL MANJAPPA.—I do not think there is any necessity to have a very big committee. Business interests are sufficiently represented in the committee.

Sri M. PALANIYAPPAN.—Will the Government be pleased to consider that no proper representation has been given to the business people?

Sri KADIDAL MANJAPPA.—When the President, Mysore Chamber of Commerce is there, there is valid reason for having any such complaints

Sri M. PALANIYAPPAN.—Has it come to the notice that there are various associations like the Handloom Cloth Weavers' Association and other associations who can be included in these Committees?

Sri KADIDAL MANJAPPA.—If need be, the Committee will hear representative of these associations.

ಶ್ರೀ ಎಸ್. ಎಂ. ಮರಿಯಪ್ಪ.—7,500 ರೂಪಾಯಿ ಟರ್ನ್‌ಓವರ್ ಇರುವವರು ಚಿಕ್ಕಪುಟ್ಟ ವರ್ತಕರು. ಇದನ್ನು 15,000 ರೂಪಾಯಿಗಳವರೆಗೂ ಏರಿಸುವುದಕ್ಕೆ ಸರ್ಕಾರದವರು ಯೋಚನೆಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಮಿತಿಯವರು ಅದನ್ನು ಯೋಚನೆಮಾಡುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕನ್‌ವಿಕ್ಷನ್ ಎಂದು ಮಾಡುತ್ತಾ ಇದ್ದೀರಿ. ಕೊಡದೇ ಇದ್ದ ಹಣ ವಸೂಲುಮಾಡುವುದಕ್ಕೆ ಬೇರೆ ಯಾವುದೂ ಮಾರ್ಗ ಏಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೂ ಒಂದು ಮಾರ್ಗ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕನ್‌ವಿಕ್ಷನ್ ಮಾಡಿಯೂ ಡಿಮ್ಯಾಂಡಿನಂತೆ ಹಣ ಬಂದಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಡಿಮ್ಯಾಂಡ್‌ನಂತೆ ಲ್ಯಾಂಡ್ ರೆವೆನ್ಯೂ ಸಹ ಬರುವುದಿಲ್ಲ. ಕ್ರಮೇಣ ಬರುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೊಡದೇ ಇದ್ದರೆ ಆಸ್ತಿ ಪಾಸ್ತಿ ಅಟ್ಯಾಚ್‌ಮಾಡಿಕೊಳ್ಳಬಹುದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಮಾಡುತ್ತೇವೆ. ಎಲ್ಲ ಸರ್ಕಾರದವರಿಗೆ ಮೋಸಮಾಡಬೇಕೆಂಬ ದುರುದ್ದೇಶ ಇಟ್ಟುಕೊಂಡಿರುತ್ತಾರೋ ಆ ಸಂದರ್ಭದಲ್ಲಿ ಆ ರೀತಿ ಮಾಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಮಾರಾಟ ತೆರಿಗೆಯನ್ನು ರದ್ದುಮಾಡಬೇಕೆಂದು ಮೈಸೂರು ದಾವಣಗೆರೆ ಶಿವಮೊಗ್ಗ, ಸಾಗರ ಈ ಪಟ್ಟಣಗಳಲ್ಲಿ ಹರತಾಳ ಆಚರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಟ್ಯಾಕ್ಸ್ ಯಾವಾಗಲೂ ಜನರಿಗೆ ಹಿತಕರವಾಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹರತಾಳಮಾಡಿಂಬಹುದು.

ಶ್ರೀ ಎಸ್. ಗೋಪಾಲಗೌಡ.—ಅದು ತಮ್ಮ ಅಭಿಪ್ರಾಯವಾಯಿತು. ಈಗ ಮೈಸೂರಿನಲ್ಲಿ ಸತ್ಯಾಗ್ರಹ ಮಾಡುತ್ತಾ ಇರುವುದೂ ಉಪವಾಸವ್ರತ ಆಚರಿಸುತ್ತಾ ಇರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಕಣ್ಣುಮುಚ್ಚಿಕೊಂಡಿದ್ದಾರೆಯೇ ?

(No answer)

MR. SPEAKER.—That does not arise out of this question.

Grant of lands under Grow More Food Scheme in Chikballapur and Sidlaghatta Taluks.

Q.—181. Sri A. MUNIAPPA (Sidlaghatta-Chikballapur—Scheduled Castes).—

Will the Government be pleased to state :—

(*a*) the number of applications received since 1950-51 from Chikballapur and Sidlaghatta Taluks, praying for grant of lands under the Grow More Food Scheme ;

(*b*) of them, how many are Harijans, and how many other raiyats (information to be furnished hobliwar) ;

(*c*) of the applications sanctioned, how many relate to Harijans and how many to other raiyats ?

A.—Sri KADIDAL MANJAPPA (Minister for Revenue and Public Works).—

(*a*) (i) Sidlaghatta Taluk 554
(ii) Chikballapur Taluk 183

(*b*)

Hobli	*Sidlaghatta Taluk*	
	Harijans	*Other raiyats*
1. Kasaba ..	64	92
2. Jangamkote ..	96	79
3. Basettihalli ..	33	45
4. Sadali ..	66	78
Total ..	259	295
Chikballapur Taluk.—		
1. Kasaba ..	30	*
2. Nandi ..	95	*
3. Mandikal ..	58	*
Total ..	183	

* Castewar information is not available in this Taluk.

(*c*) *Sidlaghatta Taluk.*—
Harijans .. 193
Other Raiyats .. 182
Chikballapur Taluk.—
Total disposals .. 62

(Details of applications of Harijans and other raiyats are not available).

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರ ತಾಲ್ಲೂಕಿನಿಂದ 183 ಅರ್ಜಿಗಳು ಬಂದಿವೆ ಎಂದು ಹೇಳಿದ್ದೀರಿ. ಇದರಲ್ಲಿ ರೈತರಿಂದ ಬಂದಿರುವುದು, ಹರಿಜನರಿಂದ ಬಂದಿರುವುದು, ಎರಡೂ ಸೇರಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎ. ಮುನಿಯಪ್ಪ.—ತಾವು ಪಟ್ಟಿ ಕೊಟ್ಟಿರುವುದರಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ 30, ನಂದಿ 95, ಮಂಡಿಕಲ್ 58, ಒಟ್ಟು 183 ಆಯಿತು: ಅದರಲ್ಲಿ ರೈತರು ಹಾಕಿರುವ ಅರ್ಜಿ ಎಷ್ಟು ?

ಅಧ್ಯಕ್ಷರು.—ಉತ್ತರದಲ್ಲೇ ಪ್ರಿಂಟಾಗಿದೆ. "Details of applications of harijans and other raiyats are not available." ಎಂದು ಹೇಳಿದ್ದಾರೆ. ಇನ್ನಾವುದಾದರೂ ಪ್ರಶ್ನೆ ಇದ್ದರೆ ಕೇಳಿ.

ಶ್ರೀ ಎ. ಮುನಿಯಪ್ಪ.—ಶಿಡ್ಲಘಟ್ಟ ತಾಲ್ಲೂಕಿಗೆ ಎಷ್ಟರ ದೊರಕಿದೆ. ಹಾಗಿರುವಾಗ ಈ ತಾಲ್ಲೂಕಿಗೆ ದೊರಕದೇ ಇರಲು ಕಾರಣವೇನು ?